ಕ್ವೆಶ್ಚನ್ ಆಫ್ ವುಮೆನ್ ಇನ್ ಇಂಡಿಯಾ' ಅನ್ನೋ ಪುಸ್ತಕವದು. ಇದರಲ್ಲಿನ ಒಂದು ಅಧ್ಯಾಯದಲ್ಲಿ ಅವರು ಬರೆದಿದ್ದೇನೆಂದರೆ, ದಕ್ಷಿಣ ಭಾರತದಲ್ಲಿ ಸತಿಯ ಆಚರಣೆ ಹಾಗೆ ಒತ್ತಾಯದಿಂದ ಬಂದದ್ದಲ್ಲ. ಸತಿಯರು ಸಂತೋಷದಿಂದ ಸಹಗಮನ ಮಾಡುತ್ತಿದ್ದರು. ಈ ಮಾತು ಮೇಲ್ನೋಟಕ್ಕೆ ನಿಜ ಅನಿಸಿದರೂ ಸೂಕ್ಷ್ಮವಾಗಿ ನೋಡಿದ್ರೆ ಅಲ್ತೇಕರ್ ಅವರು ಚರಿತ್ರೆಯನ್ನು ತಪ್ಪಾಗಿ ಗ್ರಹಿಸಿದ್ದಾರೆ ಅಂತ ನನಗನ್ನಿಸಿತು. ನನ್ನ ಹುಡುಕಾಟದಲ್ಲಿ ನನಗೆ ಬೇರೆ ತರಹದ ಮಾಹಿತಿಗಳು ಸಿಕ್ಕಿದವು. ನೋಡಿ, ಯಾವುದೇ ಒಂದು ಆಚರಣೆ ದಿನ ನಿತ್ಯದ ಕ್ರಿಯೆ ಆಗಿಬಿಟ್ಟರೆ ಒತ್ತಾಯ ಅನ್ನೋದು ಇರೋದಿಲ್ಲ. ಅನಿವಾರ್ಯತೆ ಇರ್ತದೆ. ಅವಳು ಒಪ್ತಾಳೊ ಬಿಡ್ತಾಳೊ ಅದು ಸಮಾಜಕ್ಕೆ ಮುಖ್ಯವೇ ಆಗಿರೋದಿಲ್ಲ. ಕೆಲವರು ಪೂಜೆ ಅನ್ನೋದು ಯಾಕೆ ಮಾಡಬೇಕು ಅನ್ನೋದು ಗೊತ್ತಿರದೇ ದಿನಾಲೂ ಪೂಜೆ ಮಾಡ್ತಾರಲ್ಲ, ಹಾಗೆ. ಆಚರಣೆ ಎಂಬ ಕ್ರಿಯೆ ಮಾಡಬೇಕೊ ಬಿಡಬೇಕೊ ಅನ್ನೋದಲ್ಲ.

ಅದು ಈಗಾಗಲೇನೆ ರೂಢಿಯಾಗಿರೋದ್ರಿಂದ ಅದು ನಡೀತಾ ಬರ್ತಿರ್ತದೆ. ಪಶ್ಚಿಮ ಬಂಗಾಳದಲ್ಲಿ ಆಗಿರೋದೆ ಬೇರೆ. ಅಲ್ಲಿ ಸತಿ ಸಹಗಮನ ಅಧಿಕ ಸಂಖ್ಯೆಯಲ್ಲಿ ಆಗಿರೋದು ಬ್ರಿಟಿಷರ ಕಾಲದಲ್ಲಿ. ಅಷ್ಟರಲ್ಲಾಗಲೇ ಕರ್ನಾಟಕದಲ್ಲಿ ಕಡಿಮೆಯಾಗ್ತಾ ಬಂದಿತ್ತು. ಅಲ್ಲಿ ಯಾಕೆ ಹಾಗಾಯ್ತು ಅಂದರೆ, ಅಲ್ಲಿ ವಿಧವೆಯರಿಗೂ ಭೂಮಿ ಮೇಲೆ ಹಕ್ಕು ಇತ್ತು. ಆಸ್ತಿ ಮೇಲೆ ಹಕ್ಕು ಇತ್ತು. ಹೀಗಿದ್ದಾಗ ಪಿತೃಪ್ರಧಾನ ಸಮಾಜ ವಿಧವೆಯರಿಗೆ ಭೂಮಿ ಕೊಡಲಿಕ್ಕೆ ಹೇಗೆ ಸಾಧ್ಯ? ಹೀಗಾಗಿ, ಅಧಿಕ ಸಂಖ್ಯೆಯ ವಿಧವೆಯರನ್ನ ಉದ್ದೇಶಪೂರ್ವಕವಾಗಿ ಬಲಿ ಕೊಡಲಾಯ್ತು. ಇದಕ್ಕೆ ಧರ್ಮದ ಸಮ್ಮತಿ ಇದೆ ಎಂಬಂತೆ ಬಿಂಬಿಸಲಾಯಿತು. ಕಲೋನಿಯಲ್ ರೂಲರ್ಸ್‌ಗೆ ಇದೇನು ಅಂತ ಗೊತ್ತಿರಲಿಲ್ಲ. ಅವರಿಗೆ ಇದೊಂದು ಧಾರ್ಮಿಕ ಅಭಿವ್ಯಕ್ತಿ ಎನ್ನುವಂತೆ ಬಿಂಬಿಸಲಾಗಿತ್ತು. ಇನ್ನೊಂದು ಸಂಸ್ಕೃತಿಯ ಆಚರಣೆಯನ್ನು ಬ್ರಿಟಿಷರು ಅನುಮಾನಿಸಬಾರದೆಂಬಂತೆ ವ್ಯವಸ್ಥೆ ಅವರನ್ನು ದಿಕ್ಕು ತಪ್ಪಿಸಿತ್ತು. ಒಂದು ವೇದಿಕ್ ಪಠ್ಯವನ್ನು ತಿದ್ದಿದ್ರು. ಅಥರ್ವ ವೇದದಲ್ಲಿ ಬರುತ್ತದೆ, ಅಗ್ನಿಯಲ್ಲಿ ಹೋಗು ಅನ್ನುವ ಹಾಗೆ ತಿರುಚಲಾಯಿತು. ವರ್ಷಕ್ಕೆ ಎಂಟು ಒಂಬತ್ತು ಜನ ಬ್ರಿಟಿಷರ ಕಾಲದಲ್ಲಿ ಸತಿ ಹೋಗುತ್ತಿದ್ದರು. ದಕ್ಷಿಣದಲ್ಲಿ ಇದು ಕಡಿಮೆಯಿತ್ತು. ಯಾಕೆಂದರೆ, ಬ್ರಿಟಿಷರು ಬರುವ ಪೂರ್ವದಲ್ಲಿ ಕದಂಬರು,

